

ಸೋಮಲಿಂಗನ ಗೇಟ್



ಡೆಲ್ಲಿ ಗೇಟ್ (ದಿಡ್ಡಿ ಬಾಗಿಲು)



ಜಿಬಿ ಗೇಟ್

ಬಾಗಿಲಿನಿಂದ ಮತ್ತೊಂದು ಬಾಗಿಲಿಗೆ ಕಂದಕ ದಾಟಲು ತಾತ್ಕಾಲಿಕ ಮರದ ಸೇತುವೆಗಳಿದ್ದವು. ಅವುಗಳನ್ನು ಬೇಕಾದ ಮುಚ್ಚಿ ತೆಗೆಯಲು ತಿರುಗಣೆಗಳು ಇದ್ದುದಕ್ಕೆ ಕುರುಹುಗಳನ್ನು ಈಗಲೂ ಕಾಣಬಹುದು.

## ಎಲಿಫೆಂಟ್ ಗೇಟ್

'ಆನೆ ಕೋಟೆ ಬಾಗಿಲು' ಎಂದು ಕರೆಯಲಾಗುವ ಇದು 1791ರಲ್ಲಿ ಟಿಪ್ಪು ಸುಲ್ತಾನ್ ಕಾಲದಲ್ಲಿ ನಿರ್ಮಾಣವಾಗಿವೆ. ಒಂದರ ಹಿಂದೊಂದರಂತೆ ಮೂರು ಪ್ರವೇಶ ದ್ವಾರಗಳನ್ನು ಹೊಂದಿದ್ದ ಈ ಮಾರ್ಗದಲ್ಲಿ, ಸದ್ಯ ಎರಡು ದ್ವಾರಗಳು ಉಳಿದಿವೆ. ಒಂದೊಂದು ದ್ವಾರವೂ 5.5 ಮೀಟರ್ ಎತ್ತರ ಮತ್ತು 3.75 ಮೀಟರ್ ಅಗಲ ಇವೆ. ಬಾಗಿಲಿನಿಂದ ಬಾಗಿಲಿಗೆ ಸಂಪರ್ಕ ಕೊಂಡಿಯಾಗಿ ಮರದ ತಾತ್ಕಾಲಿಕ ಸೇತುವೆ ನಿರ್ಮಿಸಿ, ಅದನ್ನು ತೆರೆದು ಮುಚ್ಚಲು 3 ಅಡಿ ವ್ಯಾಸದ ಚಕ್ರ ಅಳವಡಿಸಿದ್ದಕ್ಕೆ ಸಾಕ್ಷ್ಯಗಳಿವೆ.

ಎಲಿಫೆಂಟ್ ಗೇಟ್ ಲಾಲ್ ಮಹಲ್ ಅರಮನೆ ಮತ್ತು ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ನೇರವಾಗಿ ಸಂಪರ್ಕ ಕಲ್ಪಿಸುತ್ತದೆ.

## ವಾಟರ್ ಗೇಟ್

ಶ್ರೀರಂಗಪಟ್ಟಣದ ಚರಿತ್ರೆಯನ್ನೇ ಬದಲಾಯಿಸಿದ ಮಹತ್ವದ ಘಟನೆಗೆ ಸಾಕ್ಷಿ ಈ ಗೇಟ್. 1799ರ ಮೇ 4ರಂದು ಬ್ರಿಟಿಷರ ದಾಳಿಯಿಂದ ಶ್ರೀರಂಗಪಟ್ಟಣ ಪತನಗೊಂಡು ಟಿಪ್ಪು ಸುಲ್ತಾನ್ ನೆಲಕ್ಕುರುಳಿದ ಜಾಗವಿದು. ಇದನ್ನು ಸ್ಥಳೀಯರು 'ಸಾರಂಗ ವನ' ಎಂತಲೂ ಕರೆಯುವರು. ಪಟ್ಟಣದ ಈಶಾನ್ಯ ದಿಕ್ಕಿನಲ್ಲಿರುವ ಈ ದ್ವಾರವು ಕಾವೇರಿ ನದಿಗೆ ಸಂಪರ್ಕ ಕಲ್ಪಿಸುತ್ತದೆ. ಈ ದ್ವಾರದ ಎತ್ತರ 3 ಮೀಟರ್ ಮಾತ್ರ. ಉದ್ದ 15 ಮೀಟರ್‌ಗಳು. ಕೋಟೆಯ ಒಳಗಿನ ವಾಸಿಗಳು ನೀರು ತರಲು, ಸ್ನಾನ ಮತ್ತು ಬಟ್ಟೆ ತೊಳೆಯಲು ನದಿಗೆ ಹೋಗಿ ಬರಲು ನಿರ್ಮಿಸಿದ ಮುಖ್ಯ ದ್ವಾರವಿದು.

## ಮೈಸೂರು ಗೇಟ್

ಇದು ಆನೆ ಕೋಟೆ ಬಾಗಿಲಿಗೆ 100 ಮೀಟರ್ ದೂರದಲ್ಲಿರುವ ದ್ವಾರ. ಇದರ ಹೊರ ದ್ವಾರವು ಎತ್ತರದಲ್ಲಿ ವಾಟರ್ ಗೇಟ್‌ನಷ್ಟೇ ಇದೆ. ಎರಡನೇ ದ್ವಾರವು (ಒಳ ದ್ವಾರ) ಆನೆ ಕೋಟೆಯಷ್ಟೇ ಎತ್ತರ (5.50 ಮೀ)ವಿದೆ. ಪಟ್ಟಣದ ಬಂಗಾರದೊಡ್ಡಿ ನಾಲಾ ಅಕ್ವಡಕ್ ಮೂಲಕ ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಇದು ಹೊಂದಿಕೊಂಡಿದೆ. ಮೈಸೂರು ಗೇಟ್‌ನ ಒಳ ಮತ್ತು ಹೊರ ದ್ವಾರಗಳ ಮಧ್ಯೆ ಇರುವ ಜಾಗದಲ್ಲಿ ಪ್ರವಾಸೋದ್ಯಮ ಇಲಾಖೆ ಪಟ್ಟಣದ ಗತ ವೈಭವ ಬಿಂಬಿಸುವ ಧ್ವನಿ ಮತ್ತು ಬೆಳಕು ಯೋಜನೆ ರೂಪಿಸಿದೆ.

## ಸೋಮಲಿಂಗ ಗೇಟ್

'ಸೋಮೇಶ್ವರ ಗೇಟ್' ಎಂಬ ಹೆಸರಿನಿಂದಲೂ ಕರೆಸಿಕೊಳ್ಳುವ 'ಸೋಮಲಿಂಗ ಗೇಟ್' ಸದ್ಯ 'ಶಂಭುಲಿಂಗಯ್ಯ ಕಟ್ಟೆ' ಎಂದೇ ಪ್ರಸಿದ್ಧ. ಕಾವೇರಿ ನದಿ ದಡದ ಸಾರ್ವಜನಿಕ ಸ್ಮಶಾನಕ್ಕೆ ಇದು ಸಂಪರ್ಕ ಕಲ್ಪಿಸುತ್ತದೆ. ಪಟ್ಟಣದ ವಾಯುವ್ಯ ದಿಕ್ಕಿನಲ್ಲಿರುವ ಈ ದ್ವಾರವು ಮೂರು ಮೀಟರ್ ಎತ್ತರ ಹಾಗೂ 15 ಮೀಟರ್ ಉದ್ದ ಇದೆ. ಕೋಟೆಯ ಕೆಳಗಿನ ಈ ದ್ವಾರದಲ್ಲಿ ನುಗ್ಗಿ ನಡೆದರೆ ನೇರವಾಗಿ ನದಿ ತಲುಪಬಹುದು. ಇದು ರೈಲು ನಿಲ್ದಾಣಕ್ಕೆ 200 ಮೀಟರ್ ಅಂತರದಲ್ಲಿದೆ.

## ಡೆಲ್ಲಿ ಗೇಟ್

ಪಟ್ಟಣದ ಪಶ್ಚಿಮ ದಿಕ್ಕಿನ ಎಡ ಪಾರ್ಶ್ವದಲ್ಲಿರುವ ಈ ದ್ವಾರವು ಬೆಂಗಳೂರು ಗೇಟ್‌ನಷ್ಟೇ ಮಹತ್ವದ್ದು. ದ್ವೀಪ ನಗರಿಗೆ ಕಾಯಂ ಸಂಪರ್ಕ ಸೇತುವೆ ತಲುಪಲು ಇದ್ದ ಪ್ರಮುಖ ಮಾರ್ಗವಿದು. ಇದು 'ದಿಡ್ಡಿ ಬಾಗಿಲು' ಎಂದೇ ಪ್ರಸಿದ್ಧಿ. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ (1799) ಶತ್ರುಗಳು ಕೋಟೆಯನ್ನು ಭೇದಿಸಿ ಒಳ ನುಗ್ಗಿದ್ದು ಇಲ್ಲಿಂದಲೇ. ಇದರ ಒಳ ಪ್ರವೇಶ ದ್ವಾರದಲ್ಲಿ 'ಗೇಟ್ ಟು ಡೆಲ್ಲಿ ಬ್ರಿಡ್ಜ್' ಎಂದು ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ.

ನದಿಗೆ ಇದ್ದ ಕಾಯಂ ಸೇತುವೆ ಈಗ ಉಳಿದಿಲ್ಲ. ಕಂದಕಕ್ಕೆ ಅಂಟಿಕೊಂಡಿರುವ ಡೆಲ್ಲಿ ಗೇಟ್ ಒಂದರ ಮುಂದೆ ಒಂದರಂತೆ ಎರಡು ದ್ವಾರಗಳನ್ನು ಹೊಂದಿತ್ತು. ಸದ್ಯ ಒಂದು ದ್ವಾರ ಮಾತ್ರ ಉಳಿದಿದೆ. ಈ ದ್ವಾರಕ್ಕೆ ಹೊಂದಿಕೊಂಡಿರುವ ಕೋಟೆಯ ಕಲ್ಲುಗಳಲ್ಲಿ ಆಂಜನೇಯ ಮತ್ತು ಗಣೇಶನ ಉಬ್ಬು ಶಿಲ್ಪಗಳಿವೆ.

## ಜಿಬಿ ಗೇಟ್

ಡೆಲ್ಲಿ ಗೇಟ್‌ನ ಪೂರ್ವ ದಿಕ್ಕಿನಲ್ಲಿ, ಕರ್ನಲ್ ಬೇಯ್‌ಲಿ ಡಂಜನ್ ಸಮೀಪ ಇರುವ 'ಜಿಬಿ ಗೇಟ್' 3 ಮೀಟರ್ ಎತ್ತರವಿದೆ. ಶ್ರೀರಂಗನಾಥಸ್ವಾಮಿ ದೇವಾಲಯದ ಎಡಕ್ಕೆ 200 ಮೀಟರ್ ದೂರದಲ್ಲಿರುವ ಈ ದ್ವಾರವು ಕಾವೇರಿ ನದಿಗೆ ಕರೆದೊಯ್ಯುತ್ತದೆ. ನದಿ ತೀರದಲ್ಲಿ ಚಂದ್ರಮೌಳೇಶ್ವರ, ಆಂಜನೇಯನ ದೇಗುಲಗಳಿವೆ. ದ್ವಾರದ ಮೇಲೆ ದೇಗುಲದ ಗೋಪುರವಿದ್ದ ಕುರುಗಳಿವೆ. 16ನೇ ಶತಮಾನದಲ್ಲಿ, ವಿಜಯನಗರದ ಪ್ರತಿನಿಧಿಗಳು ನಿರ್ಮಿಸಿರುವ ದ್ವಾರವಿದು.

ಶ್ರೀರಂಗಪಟ್ಟಣದ ಕೋಟೆ, ಕಂದಕ ಮತ್ತು ದ್ವಾರಗಳು 9ನೇ ಶತಮಾನದಿಂದ 18ನೇ ಶತಮಾನದ ಉತ್ತರಾರ್ಧದವರೆಗೆ ಕಾಲ ಕಾಲಕ್ಕೆ ನಿರ್ಮಾಣ ಮತ್ತು ಅಭಿವೃದ್ಧಿ ಕಂಡಿವೆ. ಟಿಪ್ಪು ಸುಲ್ತಾನ್ ಕಾಲದಲ್ಲಿ, ಫ್ರೆಂಚ್ ಎಂಜಿನಿಯರ್‌ಗಳ ಸಹಕಾರದಲ್ಲಿ ಕೋಟೆ ಮತ್ತು ದ್ವಾರಗಳು ಹೆಚ್ಚು ಅಭಿವೃದ್ಧಿಯಾಗಿವೆ. ಹತ್ತಾರು ಯುದ್ಧಗಳನ್ನು ಕಂಡರೂ ಜಗ್ಗದ ಕುಗ್ಗದ ಮೂರು ಸುತ್ತಿನ ಈ ಕಲ್ಲಿನ ಕೋಟೆ ಮತ್ತು ಮಹಾದ್ವಾರಗಳನ್ನು ಸಂರಕ್ಷಿಸುವ ಸವಾಲು ನಮ್ಮ ಮುಂದಿದೆ.

ಪ್ರತಿಕ್ರಿಯಿಸಿ: feedback@sudha.co.in